ಯೋಚಿಸತೊಡಗಿತು.

ನಾಗತಿಹಳ್ಳಿ ಚಂದ್ರಶೇಖರ್ ತುಂಬಾ ಚೆನ್ನಾಗಿ ಮಾತಾಡಿರಬೇಕು. ಅವರ ಭಾಷಣ ಮುಗಿಯುತ್ತಿದ್ದಂತೆಯೇ ಜನರ ಚಪ್ಪಾಳೆಯಲ್ಲಿ ಅದು ವ್ಯಕ್ತವಾಯಿತು. ಆದರೆ ಅದು ಹೆಚ್ಚು ಸಾಹಿತ್ಯಿಕವಾದ್ದರಿಂದಲೋ ಅಥವಾ ಅವನ ಮನಸ್ಸು ಸುಮಿಯ ಯೋಚನೆಯಲ್ಲಿ ವ್ಯಸ್ತವಾದ್ದರಿಂದಲೋ ಪ್ರೀತಂನಿಗೆ ಆ ಭಾಷಣದ ಸಾರವನ್ನು ಸರಿಯಾಗಿ ಗ್ರಹಿಸಲು ಅಥವಾ ಗ್ರಹಿಸಿದ್ದನ್ನು ಆನಂದಿಸಲು ಸಾಧ್ಯವಾಗಲಿಲ್ಲ. ಆದರೆ ಅವರು ಮೌಲ್ಯಗಳನ್ನು ಆದರ್ಶಗಳನ್ನು ಇಟ್ಟುಕೊಂಡವರು, ಅದಕ್ಕಿಂತ ಹೆಚ್ಚಿನದಾಗಿ ಸಹೃದಯ ಮನುಷ್ಯ ಅನಿಸಿತು. ಅವರ ಪ್ರಸಿದ್ಧ ಕತೆ 'ಮಲೆನಾಡಿನ ಹುಡುಗಿ ಬಯಲು ಸೀಮೆಯ ಹುಡುಗ' ಕತೆಯನ್ನು ಇತ್ತೀಚೆಗಷ್ಟೇ ಓದಿದ್ದ. ಮೊದಲು ಪ್ರಕಟವಾದ ಇಪ್ಪತ್ತೈದು ವರ್ಷಗಳ ನಂತರ ಮರು ಪ್ರಕಟಿಸಿದ್ದ 'ಮಯೂರ' ಮಾಸಪತ್ರಿಕೆಯನ್ನು ಸುಮಿ ಅವನಿಗೆ ಓದಲು ಕೊಟ್ಟಿದ್ದಳು. ಕಥೆಯಲ್ಲಿಯ ಎಳೆಯರ ಪ್ರೇಮ, ಕಾರವಾರದ ಪರಿಸರವನ್ನು ಚಿತ್ರಿಸಿದ ರೀತಿ ಅವನಿಗೆ ಇಷ್ಟವಾದರೂ ಅದರ ಎಂಡಿಂಗ್ ಮಾತ್ರ ಅವನನ್ನು ವಿಚಲಿತಗೊಳಿಸಿದ್ದು ನಿಜ. ಕಚಗುಳಿಯಿಡುವ ಕಿಶೋರರ ಪ್ರೇಮ ದುರಂತದಲ್ಲಿ ಕೊನೆಗೊಂಡದ್ದನ್ನು ಅವನಿಗೆ ಅರಗಿಸಿಕೊಳ್ಳಲು ಕಷ್ಟವಾಗಿತ್ತು. ಆ ಕಾರಣಕ್ಕಾಗಿ ಕತೆಗಾರರ ಬಗ್ಗೆ ಚಿಕ್ಕ ಅಸಮಾಧಾನವೂ ಇತ್ತು.

ಭಾಷಣದ ನಂತರ ನಾಗತಿಹಳ್ಳಿಯವರು ವೇದಿಕೆಯಿಂದ ಕೆಳಗಿಳಿದಾಗ ಸಭಿಕರಲ್ಲಿ ಕೆಲವರು ಅವರನ್ನು ಸುತ್ತುಹಾಕಿಕೊಂಡರು. ಅವರಲ್ಲಿ ಶೈಲತ್ತೆಯೂ ಇದ್ದಳು. ಪ್ರೇಮ ಕತೆಗಳು ಪುಸ್ತಕದ ಮೇಲೆ ಆಟೊಗ್ರಾಫ್ ಕೂಡ ಪಡೆದಳು. 'ನಿಮ್ಮ ಎಲ್ಲಾ ಕತಿ ಕಾದಂಬರಿಗಳನ್ನ ಓದ್ಕೊಂಡಿನಿ ಸರ್... ಪ್ರೇಮ ಕತೆಗಳು ತುಂಬಾನೇ ಇಷ್ಟ' ಅಂದಳು. 'ಓಹ್ ಗುಡ್, ಪ್ರೇಮ ಎನ್ನುವುದು ಏಜ್‌ಲೆಸ್ ಅನುಭೂತಿ. ನಿಮ್ಮ ಕೈಯಲ್ಲಿ ಈ ಪುಸ್ತಕ ಕಂಡು ಖುಷಿಯಾಯ್ತು. ಇದರ ಪ್ರತಿಗಳು ಮುಗಿದಿವೆ' ಎಂದರು. 'ಸರ್, ಪ್ರೀತಿ ಪ್ರೇಮದ ಬಗ್ಗೆ ನಮ್ಮ ಭಾವನೆಗಳಿಗೆ ಕಚಗುಳಿಯಿಟ್ಟಂಥ ಕತೆ 'ಮಲೆನಾಡಿನ ಹುಡುಗಿ...'. ಆದರೆ ಆ ಚಂದದ ಕತೆಯನ್ನು ಸ್ಯಾಡ್ ಎಂಡ್ ಮಾಡಿದಿರಿ, ಆ ಬೇಸರ ಮಾತ್ರ ಕಾಡತಿರತೈತಿ. ಎಳೆಯ ಪ್ರೇಮವು ಪಲ್ಲವಿಸುವ ಮೊದಲೇ ಹಾಗೆ ಚಿವುಟಿದ್ದು ಸರಿನಾ?' ಎಂದಳು. ಶೈಲತ್ತೆಯ ಮಾತಿಗೆ ನಾಗತಿಹಳ್ಳಿಯವರು ನಗು ಬೀರಿದರು.

'ವಿರಹ ವಿದಾಯ ವಿಯೋಗ — ಇವೆಲ್ಲ ಪ್ರೇಮದ ಪೆಹಲುಗಳೇ ತಾನೆ!' ಎಂದರು. 'ಈಗಿನ ಜನರೇಶನ್ ಪ್ರೀತಿಯನ್ನು ಬದುಕನ್ನು ಗ್ರಹಿಸುವ ರೀತಿ ನೋಡಿದರೆ, ಎಂಡಿಂಗ್ ಕುಡ್ ಹ್ಯಾವ್ ಬೀನ್ ಬೆಟರ್ ನವ್, ಅನ್ನುತ್ತೆ' ಅಂದರು. 'ಬಟ್, ಈಗ ಹೊಸ ಕತೆ ಬರೀಬಹುದೆ ಹೊರತು, ಹಳೆಯದನ್ನು ತಿದ್ದೋಕೆ ಸಾಧ್ಯವಾಗಲ್ಲ, ಅಲ್ವಾ?' ಎಂದರು. 'ಪ್ರೇಮ ಆಗಾಗ ಪೊರೆ ಕಳಚುತ್ತಿರುತ್ತದೆ. ಪ್ರೇಮವನ್ನು ಹೊಸತನದಲ್ಲಿ ಹುಡುಕಬೇಕೆ ವಿನಃ ಹಳೆಯದರ ಬಗ್ಗೆ ಕೊರಗುವುದೇಕೆ?' ಎಂದರು. 'ನಿಜ ಸರ್, ನೀವು ಮತ್ತೆ ಆ ಹಳೆ ಕತೆಯ ಮುಕ್ತಾಯವನ್ನು ಬದಲಿಸಲು ಸಾಧ್ಯವಾಗದಿರಬಹುದು. ಆದರೆ ಹೊಸ ಜೀವಂತ ಪ್ರೇಮಕತೆಯೊಂದು ಸುಖಾಂತ್ಯವಾಗಲು ಸಹಾಯ ಮಾಡಬಹುದು' ಎಂದ ಪ್ರೀತಂ. ಶೈಲತ್ತೆಯತ್ತ ನೋಡುತ್ತಾ ಮಾತಾಡುತ್ತಿದ್ದ ನಾಗತಿಹಳ್ಳಿಯವರು ಪ್ರೀತಂನತ್ತ ತಿರುಗಿದರು. ಅವರ ನೋಟದಲ್ಲಿ ಕುತೂಹಲವಿತ್ತು. 'ಸರ್ ಇವನು ಪ್ರೀತಂ. ಕಾರವಾರದ ಹುಡುಗ. ಇದೇ ಊರಿನ ಹುಡುಗಿಯೊಂದಿಗೆ ಲವ್ ಆಗ್ಬಿಟೈತಿ ಸರ್. ನಿಮ್ಮ ಕತೆಯಲ್ಲಿದ್ದ ಹಾಗೇ ಇವನ ಪ್ರೇಮದಲ್ಲೂ ವಿಘ್ನಗಳು ಎದುರಾಗ್ಯವ. ಅದಕ್ಕ ಹಂಗಂದ ಅನಸತೈತಿ' ಎಂದಳು ಶೈಲತ್ತೆ.

ಕ್ಷಣ ಪ್ರೀತಂನನ್ನು ದಿಟ್ಟಿಸಿದ ಅವರು ಇವನಲ್ಲೇನೋ ಕತೆಯಿದೆ ಅನಿಸಿ ಹೆಗಲ ಮೇಲೆ ಕೈಹಾಕಿ, 'ಒಂದ್ ಕೆಲ್ಸ ಮಾಡೋಣ, ನಿಮಗೆ ಬೇರೆಲ್ಲೂ ಹೋಗೋದು ಇಲ್ಲಾಂದ್ರೆ, ನನ್ ಜೊತೆ ಗೆಸ್ಟ್ ಹೌಸಿಗೆ ಬನ್ನಿ. ಅಲ್ಲೇ ಕೂತು ಮಾತಾಡೋಣ ಆಯ್ತಾ? ಪ್ರೀತಿ ಪ್ರೇಮ ಅಂದ್ರೆ ಬೀದಿ ಮಾತೆ?' ಎಂದು ನಕ್ಕರು. 'ಲವರ್ಸ್ ಆರ್ ಲವ್ಡ್ ಬೈ ಆಲ್, ಮೈ ಬಾಯ್' ಎಂದು ಅವನ ಹೆಗಲ ಮೇಲೆ ಕೈ ಹಾಕಿ ಕಾರಿನತ್ತ ಕರೆದೊಯ್ದರು. ಮುಳುಗುತ್ತಿದ್ದ ನಾವೆಯನ್ನು ಸಮರ್ಥವಾಗಿ ದಡ ಸೇರಿಸುವ ನಾವಿಕ ಸಿಕ್ಕಂತೆ ಅನಿಸಿತು ಪ್ರೀತಂನಿಗೆ. ಆದರೆ ಆ ನಾವಿಕ ನಾವೆಯನ್ನು ನೇರ ತೂಫಾನ್ ಕೇಂದ್ರಕ್ಕೇ ಒಯ್ಯುವ ಅಂದಾಜು ಪ್ರೀತಂನಿಗಿರಲಿಲ್ಲ! ಗೆಸ್ಟ್ ಹೌಸಿನಲ್ಲಿ ಪ್ರೀತಂನಿಂದ ಕತೆಯನೆಲ್ಲ ಕೇಳಿಸಿಕೊಂಡ ನಾಗತಿಹಳ್ಳಿ ಸರ್ 'ನಾಳೆ ನೇರವಾಗಿ ಲಿಂಗನಗೌಡ ಪಾಟೀಲ ದರ್ಬಾರಿಗೆ...' ಎಂದು ಬೀಳ್ಕೊಟ್ಟಿದ್ದರು.

***

ಕಲಬುರಗಿಯಿಂದ ಜೇವರ್ಗಿಯ ಭೀಮಾ ನದಿ ತಟದಲ್ಲಿರುವ ಲಿಂಗನಗೌಡ ಪಾಟೀಲರ ಮೂಲಸ್ಥಾನಕ್ಕೆ ಮೂವರ ಸವಾರಿ ಹೊರಟಿತ್ತು. ಈ ಪ್ರಯಾಣವೂ ಒಂದು ಸಿನಿಮೀಯ ದೃಶ್ಯದಂತೆ ಭಾಸವಾಯಿತು ಪ್ರೀತಂನಿಗೆ. ಶೈಲತ್ತೆ 'ನಮ್ಮಕಡಿ ಎಳ್ಳ ಅಮವಾಸಿ ಹೆಂಗ್ ಆಚರಿಸ್ತಾರೆ ತೋರಿಸ್ತೀನಿ' ಅಂದಿದ್ದಳು. ಎಳ್ಳ ಅಮವಾಸ್ಯೆ ದಿನ ಇಡೀ ಪಾಟೀಲಗೌಡ ಮನೆತನದವರು ಒಟ್ಟಾಗುತ್ತಾರಂತೆ. ಭೂಮಿತಾಯಿಗೆ ಪೂಜೆ ಮುಗಿಸಿ, ಸಾಮೂಹಿಕ ಭೋಜನ, ಮನರಂಜನಾ ಕಾರ್ಯಕ್ರಮ ಎಲ್ಲ ಇರುತ್ತಂತೆ. ನೂರಾರು ಎಕರೆ ಹೊಲದಲ್ಲಿರುವ, ಪೂರ್ವಜರು ಕಟ್ಟಿದ್ದ ಮನೆಯಲ್ಲಿ ಈ ಸಾಂಪ್ರದಾಯಿಕ ಕಾರ್ಯವನ್ನು ಪ್ರತಿವರ್ಷ ವಿಜೃಂಭಣೆಯಿಂದ ಆಚರಿಸುತ್ತಾ ಬಂದಿದ್ದಾರಂತೆ. ಅಣ್ಣ, ಚಿಕ್ಕಣ್ಣ, ದೊಡ್ಡಪ್ಪ, ಚಿಕ್ಕಪ್ಪನ ಕುಟುಂಬದವರೆಲ್ಲರೂ ಎಲ್ಲಿದ್ದರೂ ಅಲ್ಲಿ ಸೇರುತ್ತಾರಂತೆ. ಭೀಮಾ ನದಿಗೂ, ಮನೆದೇವರಿಗೂ, ಹೊಲದಲ್ಲಿರುವ ಬನ್ನಿ ಮರಕ್ಕೂ ಪೂಜೆ ಸಲ್ಲಿಸಿ, ನೈವೇದ್ಯವನ್ನು ಭೂತಾಯಿಗೆ ಅರ್ಪಿಸುವ ಆಚರಣೆಯ ಮಹತ್ವವನ್ನು ಶೈಲತ್ತೆ ದಾರಿಯಲ್ಲಿ ವಿವರಿಸುತ್ತಾ ಹೋದಳು. ರಾತ್ರಿ ಅಲ್ಲೇ ವಾಸ್ತವ್ಯ ಮಾಡಿ, ಭಜನೆ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ — ಇಂತಹ ಕಾರ್ಯಕ್ರಮಗಳನ್ನೂ ಇಟಗೋತಾರಂತೆ. ಹೇಗೂ ನಾಗತಿಹಳ್ಳಿ ಸರ್ ಗುಲ್ಬರ್ಗಾದಲ್ಲಿದ್ದಾರೆ, ಅವರನ್ನು ಆಮಂತ್ರಿಸಿದರೆ ಹೇಗೆ? ಎಂಬ ಯೋಚನೆ ಶೈಲತ್ತೆಗೆ ಹೊಳೆದು, ನಿನ್ನೆ ಮಾತುಕತೆಯ ನಡುವೇ ಬರ್ತಾರೋ ಇಲ್ಲವೋ ಎಂಬ ಅನುಮಾನದಲ್ಲೇ ಕೇಳಿದ್ದಳು. ನಾಗತಿಹಳ್ಳಿ ಸರ್ ಅದಕ್ಕೆ ಒಪ್ಪಿಯೇ ಬಿಟ್ಟಿದ್ದರು! ಪ್ರೀತಂನ ಪ್ರೇಮಕತೆಯನ್ನು ಮಂಗಳಕರಗೊಳಿಸುವ ಸಾರಥ್ಯವನ್ನೂ ಹೊತ್ತಿದ್ದರು!

'ಸರ್, ನೀವು ಬರ್ತಿದ್ದೀರಿ ಅಂತ ಇಡೀ ಕುಟುಂಬವೇ ಖುಶ್ ಆಗ್ಯಾರೆ' ಎಂದಳು ಶೈಲತ್ತೆ. ಹಾಗೆ ನೋಡಿದರೆ ನಾಗತಿಹಳ್ಳಿಯವರು ಲಿಂಗನಗೌಡ ಪಾಟೀಲ ಕುಟುಂಬಕ್ಕೆ ಅಪರಿಚಿತರಲ್ಲವಂತೆ. ತನ್ನ ಹೊರತಾಗಿಯೂ ಅವರ ಕತೆ ಕಾದಂಬರಿಗಳನ್ನು ಓದಿಕೊಂಡವರಿದ್ದಾರೆ. ಸಿನಿಮಾ ನೋಡಿದವರಿದ್ದಾರೆ. ತಾಯಿಯಂತೂ 'ಅಮೃತಧಾರೆ' ಸಿನಿಮಾ ನೋಡಿ ನನ್ ಮೊಮ್ಮಗಳು ಸುಮಿಗೆ ದಿಗಂತನಂಥ ಹುಡುಗ ಸಿಗಲಿ ಅಂತ ಹತ್ತು ವರ್ಷದ ಹಿಂದೇ ಹಾರೈಸಿದ್ದಾಳಂತೆ. 'ನಮ್ಮ ಅಣ್ಣ ಲಿಂಗಣ್ಣ ಸೈತ ಸಿನಿಮಾಗಳಲ್ಲಿ ಪ್ರೇಮಿಗಳು ಪಡೋ ಕಷ್ಟ ನೋಡಿ ಕಣ್ಣಲ್ ನೀರು ಹಾಕ್ಕೋತ್ತಾರೆ ಸರ್' ಎಂದು ದೊಡ್ಡದಾಗಿ ನಕ್ಕಳು. 'ಸರ್, ಸಾಹಿತ್ಯ ಸಿನಿಮಾಗಳಿಗೆ ಮನಸ್ಸನ್ನು ಆರ್ದ್ರಗೊಳಿಸುವ ಶಕ್ತಿ ಇದ್ದರೂ, ಅಸಲಿ ಜಿಂದಗಿಗೆ ಬಂದ್ರೆ ಮೂಲ ಸ್ವಭಾವ ಬಿಡಲಾಗದ ವಿಪರ್ಯಾಸವನ್ನು ಹೇಗೆ ವಿವರಿಸುತ್ತೀರಿ?' ಎಂದಳು. ನಾಗತಿಹಳ್ಳಿಯವರು, 'ಆ ಶೋಧಕ್ಕೆ ತಾನೆ ನಾವು ಹೊರಟಿರುವುದು?' ಎಂದು ನಕ್ಕರು.

ಎಂಥ ಗಂಭೀರ ವಿಷಯವನ್ನೂ ಹಗುರದಲ್ಲೇ ನಿಭಾಯಿಸುವ ನಾಗತಿಹಳ್ಳಿ ಸರ್ ಮುಖದಲ್ಲಿ ಒಂದು ಮುಗುಳುನಗು ಸ್ಥಾಯಿಯಾಗಿರುತ್ತಿತ್ತು. ಅದು ಪ್ರೀತಂನಿಗೆ ಇಷ್ಟವಾಗುತ್ತಿತ್ತು. ನಿನ್ನೆ ಗೆಸ್ಟ್ ಹೌಸಿನಲ್ಲಿ ಅಷ್ಟು ದೊಡ್ಡ ಲೇಖಕ, ನಿರ್ದೇಶಕರಾಗಿಯೂ ಅದೆಷ್ಟು ಆತ್ಮೀಯವಾಗಿ ಮಾತನಾಡಿದ್ದರು! ಕಾಳಿ ತೀರದಲ್ಲಿ ಸುಮಿ ಮತ್ತು ತಾನು ಮೊದಲಬಾರಿಗೆ ಭೇಟಿಯಾದದ್ದು, ಇಬ್ಬರೂ ಇಷ್ಟಪಟ್ಟದ್ದು, ಜೊತೆಜೊತೆಯಲ್ಲಿ ಕಾರವಾರ ಸುತ್ತಾಡಿದ್ದು ಎಲ್ಲವನ್ನೂ ಕೇಳಿಸಿಕೊಂಡಿದ್ದರು. ಸುಮಿಯ ಸಮುದ್ರದಾಕರ್ಷಣೆ ಬಗ್ಗೆ ಹೇಳಿದಾಗ, 'ಶರಧಿ ಅಂದರೇನೇ ತೀರದ ವಿಸ್ಮಯ ಮಾರಾಯ' ಅಂದಿದ್ದರು. ಬೀಚ್ ಮೇಲೆ ಜೊತೆಯಲ್ಲಿರುವಾಗ ಅಪರಿಚಿತರ ಮಾರಕ ದಾಳಿಗೊಳಗಾದದ್ದನ್ನು ಹೇಳಿದ್ದ. ತಾವು ಅಪಾಯದ ಝೋನಿಗೆ ಹೋಗುವ ಸೂಚನೆ ಕೊಡಬೇಕಿತ್ತು ಅವನಿಗೆ. ತಲೆಗೆ ಭಯಂಕರ ಪೆಟ್ಟು ಬಿದ್ದು ಎಚ್ಚರ ತಪ್ಪಿದ ಘಟನೆಗೆ ಪ್ರೀತಂ ಹೆಚ್ಚು ಒತ್ತುಕೊಟ್ಟು ಹೇಳಿದರೂ, ಅವರು ಅಷ್ಟು ಗಮನ ಕೊಡಲಿಲ್ಲ. ಅದಕ್ಕಿಂತ ಮುಂಚಿನ ಗಾಳಿಮರದಡಿಯ ಪ್ರಣಯ ಭಾಗವನ್ನು ಮೊಟಕುಗೊಳಿಸಿದ್ದನ್ನು ಗ್ರಹಿಸಿದ್ದ ಅವರು 'ಬರೀ ಟ್ರೇಲರ್ ತೋರಿಸ್ಬೇಡವೋ ಹುಡುಗ, ಆ ರೊಮ್ಯಾಂಟಿಕ್ ಸೀನ್ ರಿಪೀಟ್ ಮಾಡು' ಅಂದಿದ್ದರು. ಅಯ್ಯೋ, ಇವರು ನನ್ನ ಕತೆ ಕೇಳ್ತಿದ್ದಾರಾ ಅಥವಾ ಸಿನಿಮಾ ಶೂಟಿಂಗಿನಲ್ಲಿದ್ದಾರಾ ಎನ್ನುವ ಸಣ್ಣ ಡೌಟ್ ಬಂದಿದ್ದೂ ನಿಜ. ಎಲ್ಲ ಮಾತುಕತೆ